## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1449 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 17-03-2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಇತರೆ ಹಿಂದುಳಿದ ವರ್ಗಗಳ (ಓಬಿಸಿ) ಅಭ್ಯರ್ಥಿಗಳಿಗೆ ಉಚಿತ ತರಬೇತಿ ನೀಡುವ ಸಂಸ್ಥೆಗಳ ಆಯ್ಕೆಗೆ ನಿಗಧಿಪಡಿಸಿದ ಮಾನದಂಡಗಳೇನು; | ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕಾರ್ಯನೀತಿ ರಚಿಸಲಾಗಿದ್ದು, ಅದರಂತೆ ದೇಶದ ಅತ್ಯುನ್ನತ ತರಬೇತಿ ಸಂಸ್ಥೆಗಳಿಂದ ಉತ್ತಮ ಗುಣಮಟ್ಟದ ತರಬೇತಿ ಪಡೆಯುವ ಉದ್ದೇಶದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ ಅನುಸಾರ ಇ-ಟೆಂಡರ್ ಕರೆದು ಅರ್ಹ ತರಬೇತಿ ಸಂಸ್ಥೆಗಳನ್ನು ಆಯ್ಕೆ ಮಾಡಲಾಗುತ್ತದೆ. ತರಬೇತಿ ಸಂಸ್ಥೆಗಳ ಆಯ್ಕೆಗೆ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br><br>**<u>ಮಾನದಂಡಗಳು :-</u>**<br><br>1. ತರಬೇತಿ ಸಂಸ್ಥೆಯು ಕಂಪನಿ ಅಧಿನಿಯಮ/ಟ್ರಸ್ಟ್ ಅಧಿನಿಯಮ/ಸೊಸೈಟೀಸ್ ನೋಂದಣಿ ಅಧಿನಿಯಮ /ಪಾಲುದಾರಿಗೆ ಅಧಿನಿಯಮ/ಮಾಲೀಕತ್ವ ಅಧಿನಿಯಮದಡಿ ಕಡ್ಡಾಯವಾಗಿ ನೋಂದಣಿಯಾಗಿರತಕ್ಕದ್ದು. (ಕಡ್ಡಾಯ ಮಾನದಂಡ).<br>2. ತರಬೇತಿ ಸಂಸ್ಥೆಯು ಯು.ಪಿ.ಎಸ್.ಸಿ/ಕೆ.ಎ.ಎಸ್/ ಬ್ಯಾಂಕಿಂಗ್ / ಆರ್.ಆರ್.ಬಿ / ಎಸ್.ಎಸ್.ಸಿ / ಗ್ರೂಪ್-ಸಿ ತರಬೇತಿ ನೀಡುವ ಸಂಬಂಧ ಕನಿಷ್ಠ 3 ವರ್ಷಗಳ ಅವಧಿಯ ಅನುಭವವನ್ನು ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ)<br>3. ಜಿ.ಎಸ್.ಟಿ ನೋಂದಣಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ)<br>4. ತರಬೇತಿ ಸಂಸ್ಥೆಯು ಹಿಂದಿನ ಮೂರು ವರ್ಷಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ರಿಟರ್ನ್ ಪ್ರತಿಗಳನ್ನು ಹೊಂದಿರತಕ್ಕದ್ದು. (ಕಡ್ಡಾಯ ಮಾನದಂಡ)<br>5. ಪ್ರತಿ ತರಬೇತಿಗೆ ಅನುಷ್ಠಾನ ಸಮಿತಿ ನಿರ್ಧರಿಸುವ ವಾರ್ಷಿಕ ವ್ಯವಹಾರ (Annual Turnover)ವನ್ನು ಹೊಂದಿರಬೇಕು. (ಕಡ್ಡಾಯ ಮಾನದಂಡ)<br>6. ತರಬೇತಿ ಸಂಸ್ಥೆಗಳು ಆನ್-ಲೈನ್ ಇ-ಮೆಟೀರಿಯಲ್ (ಸ್ಟಡಿ ಮೆಟೀರಿಯಲ್ ಪ್ರಾಕ್ಟಿಸ್ ಟೆಸ್ಟ್ ಸೀರಿಸ್, ಕೋಚಿಂಗ್ ಮೆಥಡ್) ಹೊಂದಿರಬೇಕು. ಈ ಕೆಳಕಂಡ ಅಂಕವನ್ನು ಪಡೆಯಲು ಅರ್ಹವಾಗಿರುತ್ತವೆ. |

| ಕ್ರ. ಸಂ. | ವಿಷಯ | ಅಂಕ |
|---|---|---|
| 01 | ಸಂಸ್ಥೆ ತನ್ನದೇ ಮೆಟೀರಿಯಲ್ ಹೊಂದಿದ್ದರೆ | 05 |
| 02 | ಬೇರೆ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಬಳಕೆ ಮಾಡುತ್ತಿದ್ದರೆ ( ಈ ಬಗ್ಗೆ ಉಭಯ ಸಂಸ್ಥೆಗಳ ನಡುವಿನ ಒಡಂಬಂಡಿಕೆ ಪತ್ರವನ್ನು ಹಾಕಬೇಕು). | 03 |
| 03 | ಯಾವುದೇ ಇ-ಲರ್ನಿಂಗ್ ಮೆಟೀರಿಯಲ್ ಹೊಂದಿರದಿದ್ದರೆ ಶೂನ್ಯ ಅಂಕ | 00 |

7. ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆ ಕಳೆದ 03 ವರ್ಷದಲ್ಲಿ ಆಯಾ ತರಬೇತಿ ನೀಡುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನಿಷ್ಠ 300 ಅಭ್ಯರ್ಥಿಗಳಿಗೆ ತರಬೇತಿ ನೀಡಿರಬೇಕು. ಈ ಕೆಳಕಂಡ ಅಂಕವನ್ನು ಪಡೆಯಲು ಅರ್ಹವಾಗಿರುತ್ತವೆ.

| ಕ್ರ. ಸಂ. | ಗುರಿ | ಅಂಕ |
|---|---|---|
| 01 | 300 ಕ್ಕಿಂತ ಹೆಚ್ಚು | 10 |
| 02 | 250 ಕ್ಕಿಂತ ಹೆಚ್ಚು | 08 |
| 03 | 200 ಕ್ಕಿಂತ ಹೆಚ್ಚು | 06 |
| 04 | 150 ಕ್ಕಿಂತ ಹೆಚ್ಚು | 04 |
| 05 | 100 ಕ್ಕಿಂತ ಹೆಚ್ಚು | 02 |

8. ತರಬೇತಿ ಸಂಸ್ಥೆ ಕನಿಷ್ಠ 2000 ಚ.ಅಡಿ ವಿಸ್ತೀರ್ಣವಿರುವ, ತರಬೇತಿಗೆ ಯೋಗ್ಯವಾದ ಕಟ್ಟಡವನ್ನು ಹೊಂದಿರಬೇಕು. ಅದರಂತೆ ಈ ಕೆಳಕಂಡ ಮಾದರಿಯಲ್ಲಿ ತರಬೇತಿ ಸಂಸ್ಥೆಯು ಅಂಕವನ್ನು ಪಡೆಯುತ್ತದೆ.

| ವಿಷಯ | ಅಂಕ |
|---|---|
| ತರಬೇತಿ ಸಂಸ್ಥೆಯು 2000 ಚ.ಅಡಿಯ ಸ್ವಂತ ಕಟ್ಟಡ ಹೊಂದಿದ್ದರೆ, | 05 |
| ಕನಿಷ್ಠ 03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ, | 03 |
| ಕನಿಷ್ಠ 03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ, | 02 |
| ಕನಿಷ್ಠ 2000ಕ್ಕಿಂತ ಕಡಿಮೆ 1500 ಚ.ಅಡಿ ವಿಸ್ತೀರ್ಣವಿರುವ ಸ್ವಂತ ಕಟ್ಟಡ ಹೊಂದಿದ್ದರೆ, | 04 |
| 03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ, | 03 |
| 03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ, | 02 |
| ಕನಿಷ್ಠ 1500 ಕ್ಕಿಂತ ಕಡಿಮೆ 1000 ಚ.ಅಡಿ ವಿಸ್ತೀರ್ಣ ಸ್ವಂತ ಕಟ್ಟಡ, | 03 |

| | |
|---|---|
| ಕನಿಷ್ಠ 03 ವರ್ಷ ಲೀಸ್ ಆಧಾರಿತ ಕಟ್ಟಡ ಹೊಂದಿದ್ದರೆ | 02 |
| 03 ವರ್ಷ ಬಾಡಿಗೆ ಆಧಾರಿತ ಕಟ್ಟಡ ಹೊಂದಿದ್ದರೆ. | 01 |

ಈ ಸಂಬಂಧ ಸಂಸ್ಥೆ ನೋಟರಿ ದೃಢೀಕರಣ ಕಟ್ಟಡದ ದಾಖಲೆ, ಲೀಸ್ ಅಥವಾ ಬಾಡಿಗೆ ಕರಾರು ಪತ್ರವನ್ನು ಟೆಂಡರ್ ದಾಖಲೆಯೊಂದಿಗೆ ಸಲ್ಲಿಸಬೇಕು. ಕಟ್ಟಡದ ಛಾಯಾ ಚಿತ್ರವನ್ನು ಅಪ್‌ಲೋಡ್ ಮಾಡಬೇಕು.

9. ಫಲಿತಾಂಶ

| ಕ್ರ. ಸಂ. | ವಿಷಯ | ಅಂಕ |
|---|---|---|
| 01 | ತರಬೇತಿ ಸಂಸ್ಥೆಯು ಕಳೆದ ಮೂರು ವರ್ಷದಲ್ಲಿ ಐ.ಎ.ಎಸ್-10 ಅಭ್ಯರ್ಥಿಗಳು, ಕೆ.ಎ.ಎಸ್, ಬ್ಯಾಂಕಿಂಗ್, ಆರ್.ಆರ್.ಬಿ, ಎಸ್.ಎಸ್.ಸಿ, ಗ್ರೂಪ್-ಎ.ಬಿ.ಸಿ ಅರ್ಹತಾ ಪರೀಕ್ಷೆಯಲ್ಲಿ 20 ಅಭ್ಯರ್ಥಿಗಳು ಯಶಸ್ವಿ ಫಲಿತಾಂಶ ದಾಖಲಿಸಿದ್ದರೆ, | 10 |
| 02 | ಐ.ಎ.ಎಸ್ 8 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 16 | 06 |
| 03 | ಐ.ಎ.ಎಸ್ 6 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 12 | 04 |
| 04 | ಐ.ಎ.ಎಸ್ 4 ಕ್ಕಿಂತ ಹೆಚ್ಚು ಕೆ.ಎ.ಎಸ್/ಇತರೆ 08 | 02 |

ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಸೇರಿ

10. ತರಬೇತಿ ಸಂಸ್ಥೆ ಕನಿಷ್ಠ ಒಂದು ವರ್ಷದ ಅವಧಿಗೆ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ಹೊಂದಿರಬೇಕು. ಈ ಕೆಳಕಂಡ ಅಂಕ ಪಡೆಯತಕ್ಕದ್ದು.

| ವಿಷಯ | ಅಂಕ |
|---|---|
| ಕನಿಷ್ಠ 05 ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿ | 05 |
| ಕನಿಷ್ಠ 04 ಸಿಬ್ಬಂದಿ | 04 |
| ಕನಿಷ್ಠ 03 ಸಿಬ್ಬಂದಿ | 03 |
| ಕನಿಷ್ಠ 02 ಸಿಬ್ಬಂದಿ | 02 |
| ಕನಿಷ್ಠ 01 ಸಿಬ್ಬಂದಿ | 01 |

ಖಾಯಂ ಸಿಬ್ಬಂದಿ ಎಂಬುದನ್ನು ದೃಢೀಕರಿಸಿ ಸಿಬ್ಬಂದಿ ವಿವರವನ್ನು ಮಾಹೆವಾರು ಸಂಸ್ಥೆಯಿಂದ ನೀಡಲಾದ ಆನ್-ಲೈನ್ ಪೇಮೆಂಟ್ EPF/ESI/TDS ಮೊದಲಾದ ನೋಟರಿಗಳನ್ನು ದೃಢೀಕರಿಸಿ ದಾಖಲೆಯನ್ನು ಒದಗಿಸಬೇಕು.

| | | |
|---|---|---|
| | | 11. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸಂಸ್ಥೆ ಕನಿಷ್ಠ 10 ಪುರುಷ-ಮಹಿಳಾ ಶೌಚಾಲಯ ಹೊಂದಿರಬೇಕು. (ನೋಟರಿ ದೃಢೀಕರಣದೊಂದಿಗೆ ಭಾವಚಿತ್ರ ಸಲ್ಲಿಸಬೇಕು)<br><br>12. ತರಬೇತಿ ಸಂಸ್ಥೆಯು ತಮ್ಮದೇ ಅಧ್ಯಯನ ಸಾಮಾಗ್ರಿಗಳನ್ನು ಹೊಂದಿರಬೇಕು/ ಬೇರೆ ಪ್ರಕಾಶನ ಸಹಭಾಗಿತ್ವದ ಅಧ್ಯಯನ ಸಾಮಾಗ್ರಿ ಹೊಂದಿರಬೇಕು. (ಅಧ್ಯಯನ ಸಾಮಾಗ್ರಿ ವಿವರವನ್ನು ದಾಖಲಿಸಬೇಕು. ತಾಂತ್ರಿಕ ಬಿಡ್ ತೆರೆಯುವ ವೇಳೆ ಹಾಜರುಪಡಿಸಬೇಕು).<br><br>**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಸಂಸ್ಥೆಗಳ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ.**<br><br>1. ಪರೀಕ್ಷಾ ಪೂರ್ವ ತರಬೇತಿ ನೀಡುವ ಸಂಸ್ಥೆಯು ಅಂಗೀಕೃತ ಸಂಸ್ಥೆ/ಇಲಾಖೆಯಿಂದ ನೊಂದಾಣಿ ಮಾಡಿಸಿಕೊಂಡಿರಬೇಕು.<br>2. ಟೆಂಡರ್ ಸಲ್ಲಿಸುವ ಸಂಸ್ಥೆಯು ಹಿಂದಿನ ಸಾಲುಗಳಲ್ಲಿ ತರಬೇತಿ ನೀಡುವಲ್ಲಿ ಇಲಾಖೆ ನಿಗದಿಪಡಿಸುವಷ್ಟು ವರ್ಷಗಳ ಅನುಭವವನ್ನು ಹೊಂದಿರಬೇಕು.<br>3. ಸಂಸ್ಥೆಯು ಇಲಾಖೆ ಕೋರುವಂತೆ ಕಳೆದ ಸಾಲುಗಳಲ್ಲಿ ಯಶಸ್ವಿ ಅಭ್ಯರ್ಥಿಗಳನ್ನು ಹೊಂದಿರಬೇಕು.<br>4. ಸಂಸ್ಥೆಯು ಆದಾಯ ಮತ್ತು ಸೇವಾ ತೆರಿಗೆಯನ್ನು ಪಾವತಿಸುತ್ತಿರಬೇಕು.<br>5. ಸಂಸ್ಥೆಯು ಇಲಾಖೆ ಕೋರುವಂತೆ ಕಳೆದ ಸಾಲುಗಳಲ್ಲಿ ನಿಗದಿತ ವಾರ್ಷಿಕ ವಹಿವಾಟನ್ನು ಹೊಂದಿರಬೇಕು.<br>6. ಸಂಸ್ಥೆಯು ಸುವ್ಯವಸ್ಥಿತವಾದ ತರಗತಿ ಕೊಠಡಿ, ಗ್ರಂಥಾಲಯ, ಆಡಿಯೋ-ವಿಷ್ಯುಯಲ್ ಕೊಠಡಿಗಳಂತಹ ಮೂಲಭೂತ ಸೌಲಭ್ಯ ಹೊಂದಿರಬೇಕು.<br>7. ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕವೇ ಇ-ಟೆಂಡರ್ ಸಲ್ಲಿಸಬೇಕು. |
| ಆ) | ಕಾಲಕಾಲಕ್ಕೆ ಸೇರ್ಪಡೆಗೊಂಡ ಸಂಸ್ಥೆಗಳಿಂದ ಗುಣಮಟ್ಟದ ತರಬೇತಿಯನ್ನು ನೀಡುವ ವ್ಯವಸ್ಥೆಗಳ ಪರಿಶೀಲನೆಗಾಗಿ ಸ್ಥಾಪಿಸಲಾದ ಮೇಲ್ವಿಚಾರಣಾ ಕಾರ್ಯವಿಧಾನಗಳಾವುವು : | 1. ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನೀಡಲಾಗುತ್ತಿರುವ ತರಬೇತಿಯ ಗುಣಮಟ್ಟವನ್ನು ಮೂರನೇ ವ್ಯಕ್ತಿ/ ಸಂಸ್ಥೆಯಿಂದ ಅಂದರೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಥವಾ ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ/ಐಐಎಂಬಿ/ಮೊದಲಾದ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು/ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳು/ಕೆ.ಇ.ಎ ಮೂಲಕ ಮೌಲ್ಯಮಾಪನ ಮಾಡಿಸಲಾಗುವುದು.<br><br>2. ಗುಣಮಟ್ಟದ ತರಬೇತಿ ಸಂಸ್ಥೆಯನ್ನು ಗುರುತಿಸುವ ಸಂಬಂಧ ವಿದ್ಯಾರ್ಥಿಗಳಿಂದ ತರಬೇತಿ ಸಂಸ್ಥೆಗಳ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರ ಪಡೆಯಲಾಗುವುದು.<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ತರಬೇತಿ ನೀಡುವ ಸಂಸ್ಥೆಯಿಂದ ಅಭ್ಯರ್ಥಿಗಳ ಮಾಸಿಕ ಹಾಜರಾತಿ, ಅಭ್ಯರ್ಥಿಗಳಿಗೆ ನಡೆಸುವ ಪರೀಕ್ಷಾ ಮಾಹಿತಿ, |

| | | |
|---|---|---|
| | | ತರಬೇತಿ ನೀಡಿದ ಬಗ್ಗೆ ವರದಿಯನ್ನು ಪಡೆಯಲಾಗುತ್ತದೆ. ಜೊತೆಗೆ ಸಂಸ್ಥೆಗಳು ಅಭ್ಯರ್ಥಿಗಳಿಗೆ ಗುಣಮಟ್ಟದ ತರಬೇತಿ ನೀಡುವ ಬಗ್ಗೆ ರಾಜ್ಯ ಮಟ್ಟದ / ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಕಾಲ ಕಾಲಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು. |
| ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಶಸ್ವಿ ಅಭ್ಯರ್ಥಿಗಳ ಸಂಖ್ಯೆ ಎಷ್ಟು? | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಯು.ಪಿ.ಎಸ್.ಸಿ/ಕೆ.ಎ.ಎಸ್/ಬ್ಯಾಂಕಿಂಗ್/ಗ್ರೂಪ್-ಸಿ/ಎಸ್.ಎಸ್.ಸಿ ಮತ್ತು ಆರ್.ಆರ್.ಬಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಲಾಗುತ್ತಿದ್ದು. ಕಳೆದ ಮೂರು ವರ್ಷಗಳಲ್ಲಿ ತರಬೇತಿ ಪಡೆದು ಯಶಸ್ವಿಯಾದ/ ವಿವಿಧ ಹುದ್ದೆಗಳನ್ನು ಪಡೆದ ಅಭ್ಯರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ. |

| ಕ್ರ. ಸಂ. | ಸೇವೆಗಳು | ಸಮಾಜ ಕಲ್ಯಾಣ ಇಲಾಖೆ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
|---|---|---|---|
| 1 | ಯು.ಪಿ.ಎಸ್.ಸಿ./ ನಾಗರೀಕ ಸೇವೆಗಳು | 05 ಅಭ್ಯರ್ಥಿಗಳು | 07 ಅಭ್ಯರ್ಥಿಗಳು |
| 2 | ಕೆ.ಎ.ಎಸ್./ ನಾಗರೀಕ ಸೇವೆಗಳು | 09 ಅಭ್ಯರ್ಥಿಗಳು | 55 ಅಭ್ಯರ್ಥಿಗಳು |
| 3 | ಬ್ಯಾಂಕಿಂಗ್/ಗ್ರೂಪ್ -ಸಿ/ಎಸ್.ಎಸ್.ಸಿ/ ಆರ್.ಆರ್.ಬಿ. | 410 ಅಭ್ಯರ್ಥಿಗಳು | 38 ಅಭ್ಯರ್ಥಿಗಳು |

ಸಕಇ 118 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.